**ದಿನಾಂಕಃ 03-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ.ಎಸ್.ಐ., ಆರೋಪಿ ಪರ ವಕೀಲರಿಂದಃ**

1. ನಾನು ಎಸ್.ಎಸ್.ಎಲ್.ಸಿ., ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಸ್ಪಷ್ಟವಾಗಿ ಓದಲು ಬರೆಯಲು ಬರುತ್ತದೆ. ನಾನು ಆರೋಪಿಗೆ ಕೊಟ್ಟಂತಹ ನೋಟಿಸ್‌ನಲ್ಲಿ, ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ಆರೋಪಿಗೆ ನೋಟಿಸ್ ಕೊಡಲು ಮತ್ತು ಪಿರ್ಯಾದಿಯನ್ನು ಸಲ್ಲಿಸಲು ವಕೀಲರಿಗೆ ಯಾರು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಕುಟುಂಬದಲ್ಲಿ ಎಲ್ಲರೂ ಕುಳಿತು ಮಾತನಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೋಟಿಸನ್ನು ಬಡಿಗೇರ ವಕೀಲರ ಮೂಲಕ ಕಳುಹಿಸಿರುತ್ತೇನೆ . ಸದ್ರಿ ವಕೀಲರ ಮೂಲಕವೇ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ನಾನು ಎಲ್.ಐ.ಸಿ. ಏಜೆಂಟ ಆಗಿ ಕೆಲಸ ಮಾಡುತ್ತೇನೆ. ಸದ್ರಿ ಕೆಲಸದಿಂದ ಮತ್ತು ವ್ಯವಸಾಯದಿಂದ ನನ್ನ ಉಪಜೀವನ ನಡೆಯುತ್ತದೆ. ನನಗೆ 02 ಎಕರೆ ಜಮೀನು ಇದೆ. ಸದ್ರಿ ಜಮೀನು ನನ್ನ ಹೆಸರಿನಲ್ಲಿ ಇದೆ. ಸದ್ರಿ ಜಮೀನು ಮಳೆ ಆಶ್ರಿತ ಜಮೀನಾಗಿರುತ್ತದೆ. ಸದ್ರಿ ಜಮೀನನ್ನು ಲಾವಣಿಗೆ ಕೊಡುತ್ತೇವೆ. ಸದ್ರಿ ಜಮೀನಿಂದ ವರ್ಷಕ್ಕೆ ಗರಿಷ್ಠ ರೂ.1,50,000/- ಆದಾಯ ಬರುತ್ತದೆ. ಎಲ್.ಐ.ಸಿ. ಮತ್ತು ವ್ಯವಸಾಯವನ್ನು ಹೊರತುಪಡಿಸಿ ನನಗೆ ಬೇರೆ ಆದಾಯದ ಮೂಲ ಇಲ್ಲ.

2. ಆರೋಪಿಯು ಸರ್ಕಾರಿ ನೌಕರನಾಗಿರುತ್ತಾನೆ ಎಂದು ಹೇಳಿರುತ್ತಾನೆ. ಯಾವ ಇಲಾಖೆಯಲ್ಲಿ ನೌಕರಿ ಮಾಡುತ್ತಾನೆ ಎಂದು ಗೊತ್ತಿಲ್ಲ. ಆರೋಪಿ ಮತ್ತು ನನ್ನ ನಡುವೆ 10 ವರ್ಷಗಳಿಂದಲೂ ಪರಿಚಯ. ಆರೋಪಿಯು ನನ್ನ ಸ್ನೇಹಿತನಿಂದ ಪರಿಚಯವಾಗಿರುತ್ತಾನೆ. ಈ ಪ್ರಕರಣ ಹೊರತುಪಡಿಸಿ ನನ್ನ ಮತ್ತು ಆರೋಪಿಯ

ನಡುವೆ ಬೇರೆ ವ್ಯವಹಾರ ಇಲ್ಲ. ಆರೋಪಿಯು ಆಗಾಗ ನನ್ನ ಬಳಿ ರೂ.5000/-, ರೂ.10,000/-ಮತ್ತು 15,000/-ಹಣ ಪಡೆದುಕೊಳ್ಳುತ್ತಿದ್ದ.ಆತನು ತೆಗೆದುಕೊಂಡ ಹಣವನ್ನು ನಗದು ರೂಪದಲ್ಲಿಯೇ ವಾಪಸ್ಸ ಕೊಡುತ್ತಿದ್ದ. ನನಗೆ ವರ್ಷಕ್ಕೆ 2 ರಿಂದ 3 ಲಕ್ಷ ಆದಾಯ ಬರುತ್ತದೆ. ನಮ್ಮ ಮನೆಯಲ್ಲಿ ನಾನೊಬ್ಬನೇ ದುಡಿಯುವ ವ್ಯಕ್ತಿ ಎಂದರೆ ಸರಿ. ದಿನಾಂಕಃ10-06-2018 ರಂದು ಆರೋಪಿಗೆ ಹಣ ಕೊಟ್ಟಿರುತ್ತೇನೆ. ಆ ದಿನಾಂಕದಿಂದ ಒಂದು ತಿಂಗಳ ಮುಂಚಿತವಾಗಿ ಅಂದರೆ 5 ನೇ ತಿಂಗಳಿನಲ್ಲಿ ಆರೋಪಿ ಹಣ ಕೇಳಿದ್ದರು. ಜಮೀನನ್ನು ಲಾವಣಿಗೆ ಹಾಕಿದಾಗ ವರ್ಷಕ್ಕೆ ಒಂದು ಎಕರೆಗೆ ರೂ. 20,000/- ಕೊಡುತ್ತಾರೆ. ಆರೋಪಿ ನನ್ನ ಬಳಿ ರೂ.1,15,000/- ಹಣ ಕೇಳಿದ್ದರು. ಯಾವ ಉದ್ದೇಶಕ್ಕಾಗಿ ಹಣ ಬೇಕೆಂದು ಅವರು ಹೇಳಲಿಲ್ಲ, ಹಣದ ಅವಶ್ಯಕತೆ ಇದೆ ಎಂದು ಅಷ್ಟೇ ಹೇಳಿದ್ದರು. ಆರೋಪಿಯು ಸದ್ರಿ ಹಣವನ್ನು ಹಾವೇರಿಯಲ್ಲಿ ಕೇಳಿದ್ದರು, ನಂತರ ಮನೆಗೆ ಬಂದು ಕೇಳಿದ್ದರು. ಆತನು ಒಂದು ತಿಂಗಳೊಳಗಾಗಿ ಹಣ ವಾಪಸ್ಸ ಕೊಡುತ್ತೇನೆ ಎಂದು ಹೇಳಿದ್ದ. ನಾನು ಕೆನರಾ ಬ್ಯಾಂಕ್ ಒಂದರಲ್ಲಿ ಮಾತ್ರ ಖಾತೆ ಹೊಂದಿರುತ್ತೇನೆ. ಆರೋಪಿಗೆ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದ್ರಿ ಹಣವನ್ನು ಯಾವ ಮುಖಬೆಲೆಯ ನೋಟಗಳನ್ನು ಕೊಟ್ಟಿರುತ್ತೇನೆ ಎಂದು ಗೊತ್ತಿಲ್ಲ. ಸದ್ರಿ ಹಣವನ್ನು ನಮ್ಮ ಮನೆಯಲ್ಲಿ ಆರೋಪಿಯನ್ನು ಕರೆಯಿಸಿ ಕೊಟ್ಟಿರುತ್ತೇನೆ. ಸದ್ರಿ ಹಣ ಕೊಡುವಾಗ ನನ್ನ ತಮ್ಮ ಇದ್ದ.

**3.** ಆರೋಪಿ ಮತ್ತು ನನ್ನ ನಡುವೆ 10 ವರ್ಷದ ಪರಿಚಯದಲ್ಲಿ ನಾವಿಬ್ಬರು ನಮ್ಮಿಬ್ಬರ ಮನೆಗಳಿಗೆ ಹೋಗಿ ಬರುವುದು ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ನಾನು ಆರೋಪಿಯ ಮನೆಗೆ ಹೋಗಿಲ್ಲ, ಆದರೆ ಆರೋಪಿ ನಮ್ಮ ಮನೆಗೆ ಬಂದು-ಹೋಗುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಯ ಮನೆಯಲ್ಲಿ ಯಾರು ಯಾರು ಇದ್ದಾರೆಂದು ನನಗೆ ಹೇಳಲು ಬರುವುದಿಲ್ಲ. ಆರೋಪಿಗೆ ಹಣ ಕೊಡುವುದು ಆತನ

ಮನೆಯವರಿಗೆ ಗೊತ್ತಿತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ನುಡಿಯುತ್ತಾರೆ. ಆರೋಪಿಗೆ ಹಣ ಕೊಡುವಾಗ ಕಾಗದ-ಪತ್ರ, ಬಾಂಡ್ ಈ ರೀತಿ ಯಾವುದೇ ಪತ್ರ ಮಾಡಿಸಿಕೊಂಡಿಲ್ಲ. ಆ ರೀತಿ ಪತ್ರ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸ್ನೇಹಸಂಬಂಧದಿಂದ ಹಣ ಕೊಟ್ಟಿರುತ್ತೇನೆ. ವಿಜಯಗೌಡ ನಿಂಗನಗೌಡ ಪಾಟೀಲ ಎನ್ನುವವರು ನನ್ನ ತಮ್ಮ. ನಾನು ಮತ್ತು ನನ್ನ ತಮ್ಮ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಚೆಕ್‌ಬೌನ್ಸ ಪ್ರಕರಣಗಳನ್ನು ಅನೇಕರ ಮೇಲೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲಾವಕಾಶ ನೀಡಲು ಯಾವುದೇ ಸೂಕ್ತ ಕಾರಣವಿರುವುದಿಲ್ಲ, ಆದ್ದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**.)**

**ಓ ಹೇ ಕೇ ಸರಿ ಇದೆ.**

-ಸಹಿ-

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಹಾವೇರಿ.**